ದಿವಾಳಿಯಾದ ಡಿಕ್ರೀ ದೇಣೀದಾರ ಬೆಂಗಳೂರು ಕಬ್ಬರಸಾಬರ ಪ್ಯಾಟೇಲಿರತಕ್ಕ ಇನ್ಯಾಕಯ್ಯನ ವಿಷಯದಲ್ಲಿ—

ಸ್ರ 1888ನೇ ಇಸವಿ ದಿವಾಳಿ ಕೇಸ್ ನಂಬರ್ 975.

ಹುಕುಂ.

ಮೇಲ್ಕಂಡ ಇನ್ಯಾಕಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್‌ರಾದ ವೆ|| ಸಿ. ಕೈನೆ ಸಾಹೆಬರವರ ರೂಬರೂ ಅರ್ಜೀದಾರನಾದ ಇನ್ಯಾಕಯ್ಯನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೀದಾರ್ರಾದ 1–2–3ನೇ ಯವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಯಲ್ಲರೂ ಹಾಜರು.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಇನ್ಯಾಕಯ್ಯನು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ 1889ನೇ ಇಸವಿ ಜನವರಿ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1889ನೇ ಇಸವಿ ಫಿಬ್ರವರಿ 6ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು	ಲೇಣೀದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ	ಸಾಲದ ಮೊತ್ತ	ಯಾವ ಸಾಲಕ್ಕೋಸ್ಕರ ದಸ್ತಗಿರೀ ಮಾಡಲ್ಪಟ್ಟಿದ್ದರೆ	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ	ಷರಾ
1	ಮೈಸೂರು ಟ್ರೇಡ್ ಬ್ಯಾಂಕ್ ಯೇಜಂಟ್-ರಾವು ರಾನು	72 3 6		ಡಿಕ್ರಿ ಬಾಬತ್ತು	

ಸಿ. ಶ್ರೀನಿವಾಸಯ್ಯಂಗಾರ್ಯ,
ಸಬ್ ಜಡ್ಜ.

ಹಾಸನ ಡಿಸ್ಟ್ರಿಕ್ಟ್.

ತಾರೀಖು 16ನೇ ಫಿಬ್ರವರಿ 1889.

ಯಿಬರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ವೆ|| ದಿವಾನ್ ಸಾಹೆಬರವರ ಹುಕುಂ ಬವೋಜಿಬ್ ಹಾಸನ ಡಿಸ್ಟ್ರಿಕ್ಟಿನ ಪೈಕಿ ಮಂಜರಾಬಾದು ತಾಲ್ಲೂಕಿಲ್ಲಿ ಇರುವ ಮಾರನಹಳ್ಳಿ ಘಾಟಿಯಲ್ಲಿ ಟೋಲ್‌ಗೇಟ್ ಯೆಂಬ ಸುಂಕದ ಕಟ್ಟಿ ವಳಗೆ ಸ್ರ 1889ನೇ ಇಸವಿ ಏಪ್ರೆಲ್ ಮಾಹೆ 1ನೇ ಮುರ್ತು ಲಾಗಾಯತು 1890ನೇ ಇಸವಿ ಮಾರ್ಚಿ 31ರವರಿಗೆ ಸುಂಕ ವಸೂಲ್‌ಮಾಡುವ ಸ್ವೀತಂತ್ರ್ಯವು 1889ನೇ ಇಸವಿ ಮಾರ್ಚಿ ತಾರೀಖು 27ರಲ್ಲಿ ಸಕಲೇಶಪುರದ ಮೊಕ್ಕಾಮಿನಲ್ಲಿ ತಾಲ್ಲೂಕು ಕಛ್ಚೇರಿವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲೀ ಹಕ್ಕನ್ನ ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಾಗಿರುವ ಪೆಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೇನೇ ಟೋಲ್ ವಸೂಲ್ಮಾಡಬೇಕು. ಮತ್ತು ಸ್ರ 1876ನೇ ಇಸವಿ ನವಂಬರ್4ನೇ ಮುರ್ತು 274ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷ್ನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಘಾಯಿಷಾಗಿರುವ ರೂಲ್‌ಸ್‌ಗಳಿಗನುಸಾರ ನಡಕೊಳ್ಳಬೇಕು.

3. ಚಪದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸ್ನ ಡಿಸ್ಟ್ರಿಕ್ಟು ಆಫಿಸರವರು ಅಧಿಕಾರ ವೊಳಿಸಿಕೊಂಡಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ 4ರಲ್ಲಿ ಒಂದು ಅಂಕ ಮೊಬಲಗನ್ನ ಅಡ್ವನಸಾಗಿ ತೇವಣಿಯಿಟ್ಟು ಬಾಕಿ ಮೊಬಲಗನ್ನ 1889ನೇ ಇಸವಿ ಏಪ್ರೆಲ್ 20ರ ಲಾಗಾಯತು ಸಮನಾದ 6 ಖಿಸ್ತು ಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಲಾಯಿಬಾದಲು ಬ್ಯಾನನ್ನ ಜಾಮೀನಾ ಕೊಡಬೇಕು. ಸದರೀ ಜಾಮೀನಾ ದಸ್ತೈವಜು ಕ್ರಮವಾಗಿ ರಿಜಿಸ್ಟರು ಮಾಡಿಸಿ ಹಾಜರ್ ಪಡಿಸಬೇಕು.

5. ಶೇವಣಿ ಇಡದೇ ಇದ್ದರೆ ಅಥವಾ ಜಾಮೀನು ಕೊಡದೆ ಇದ್ದರೆ ದರಖಾಸ್ತುದಾರನಿಗೆ ನುಕಸಾನುಕರವಾಗಿ ಕಂಟ್ರಾಕ್ಟು 2ನೇ ಹರಾಜ್‌ಮಾಡಲ್ಪಡುವದು ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತೀ ತಾರೀಖಿನ ವರಿಗೆ ತಿಂಗಳು ಬುವಕ್ಕೆ ರೂಪಾಯಿ ಬುವಕ್ಕೆ 1 ಕಾಸಿನಂತೆ ಬಡ್ಡಿ ವಸೂಲ್ಮಾಡಲ್ಪಡುವದು ಮತ್ತು ಡಿಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮೀನುದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು 2ನೇ ಹರಾಜ್ ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು, ಅದರಿಂದ ಯೀನಾದರೂ ನಷ್ಟಸಂಭವಿಸಿದರೆ ಆದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನುದಾರನಿಂದ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಕಿಮಾಯಿ 4 ಮತ್ತು 5ನೇ ಕಲಂನಲ್ಲಿ ನಮೂದಾಗುವ ಪರತ್ತಿಗೆ ಬಳವಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಬಂದಾಬಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿ ಇರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರುವಾಕವಾದ ಲೆಕ್ಕವನ್ನ ಇಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟುಮತ್ತು ತಾಲ್ಲೂಕು ಉದ್ಯೋಗಸ್ಥರ ಇನ್‌ಸ್ಪೆಕ್ಷನಿಗೆ ಲೆಕ್ಕ ಪಳಗಾಗಿ ಇರತಕ್ಕದ್ದು.

8. ಕಂಟ್ರಾಕ್ಟುದಾರನು ಆಮದಿರಫ್ತಿನ ಲೆಕ್ಕ ಯಿಡಲೋಸ್ಕರ ಒಬ್ಬಂದಿ ಅಂದರೆ ಮುತ್ಸದ್ದಿ ಖರ್ಚನ್ನು ವಹಿಸಲು ಬದ್ಧನಾಗಿ ಇರತಕ್ಕದ್ದು.

9. ಗವರ್ನಮೆಂಟ್ ಟೋಲ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಯಿಟ್ಟು ಕೊಂಡಿತರಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ತಿಂಗಳು ಗುಬ್ರೀ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲ್ ಲೆಕ್ಕವನ್ನ ಮಂಜೀರಾಬಾದ್ ತಾಲ್ಲೂಕು ಕಚ್ಚೇರಿಗೆ ಕಳುಹಿಸತಕ್ಕದ್ದು.

11. ದರಗಳ ಪಟ್ಟಿ ಈ ಕೆಳಗೆ ವಿವರಿ ಯಿಧೆ.

		ರೂ.	ಆ.	ಪೈ.
1.	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2.	ಪ್ರತಿ ಎರಡು ಡಿಟೋ	1	0	0
3.	ಪ್ರತಿ ಯಕ್ಕಾ ಮೇಲೂ	0	4	0
4.	ಸ್ಪ್ರಿಂಗ್‌ಯಾನೇ ಬಿಲ್ಲಿನ ಮೇಲೆ ಇರುವ ..	0	2	0
5.	ಎಂಟು ಎತ್ತುಗಳಿಂದ, ಕೋಣ[illegible] ಪ್ರಯಾ ಹೇಸರಕತ್ತೆಗಳಿಂದ ಎಳೆಯಲ್ಪಟ್ಟು ಮತ್ತು ಬಿಲ್ಲಿನ [illegible] ದ	1	8	0
6.	ಡಿಟೋ [illegible]	0	8	0
7.	ಆರ [illegible] ಎತ್ತುಗಳಿಂದ ಯಿಲ್ಲವೆ ಯಿಳಿಯಲ್ಪಟ್ಟ ಗಾಡಿ ನ ಬಾಡಿಗೆ ಭಂಡಿ ಬಂದಕ್ಕ ಭರ್ತಿಯಾಗಿದ್ದರೆ.	0	12	0
8.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	6	0
9.	ನಾಲ್ಕು ಯತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟ್ಟಾಕಣಗಳಿಂದ, ಕತ್ತೆಗಳಿಂದ, ಹೆಸರಕತ್ತೆಗಳಿಂದ, ಯಿಳಿಯಲ್ಪಟ್ಟು ಗಾಡಿ ಮತ್ತು ಬಾಡಿಗೆ ಭಂಡಿ ಬುವಕ್ಕೆ ಭರ್ತಿಯಾಗಿ ಯಿದ್ದರೆ	0	8	0
10.	ಡಿಟೋ ಡಿಟೋ ಭರ್ತಿ ಯಿಲ್ಲದಿದ್ದರೆ	0	4	0
11.	ಯರಡು ಯತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟ್ಟಾಕಣಗಳಿಂದ, ತ್ತೆಗಳಿಂದ, ಯಾ ಹೇಸರಕತ್ತೆಗಳಿಂದ, ಯಿಳಿಯಲ್ಪಟ್ಟ ಗಾಡಿಯಾ ಬಾಡಿಗೆ ಭಂಡಿ ಬುವಕ್ಕೆ ಭರ್ತಿಯಾಗಿ ಇದ್ದರೆ	0	4	0
12.	ಡಿಟೋ ಡಿಟೋ ಭರ್ತೀ ಯಿಲ್ಲವಿದ್ದರೆ	0	2	0
13.	ಕೋಣಗಳು ಯಾ ಯತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಯಿದ್ದರೆ. ..	0	1	0
14.	ಡಿಟೋ ಡಿಟೋ ಹೊರ ಯಿಲ್ಲದಿದ್ದರೆ	0	0	3
15.	ಪ್ರತಿ ಆನೆಗೂ	1	8	0
16.	ಪ್ರತಿ ವಂಟೆಗೂ ಜೊರೆ ಹೊರಿಸಲ್ಪಟ್ಟಿದ್ದರೆ	0	8	0
17.	ಡಿಟೋ ಡಿಟೋ ಜೊರೆ ಯಿಲ್ಲದಿದ್ದರೆ	0	4	0
18.	ಡಿಟೋ ಕುದರೆಗೂ ಹೊರೆ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತಿದ್ದರೆ ..	0	1	6
19.	ಹೊರೆ ಯಿಲ್ಲವ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದರೆಗೂ	0	0	9
20.	ಪ್ರತಿ ತಟ್ಟು ಯಾ ಹೇಸರ ಕತ್ತೆಗೂ ಜೊರೆ ಜೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತಿದ್ದರೆ	0	0	9
21.	ಡಿಟೋ ಹೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22.	ಪ್ರತಿ ಕತ್ತೆಗೂ ಜೊರೆ ಹೊರಿಸಲ್ಪಟ್ಟು ಯಿದ್ದರೆ ಯಾ ಸವಾರಿ ಮಾಡಲ್ಪಡುತಿದ್ದರೆ ..	0	0	6
23.	ಜೊರೆ ಯಿಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ ..	0	0	1
24.	ಪ್ರತಿ ಕುರಿ, ಮೇಕೆ ಯಾ ಹಂಬಿಗೂ	0	0	1
25.	ಯೆಂಟು ಚಕ್ರಗಳಿಗೊಡನೆ ಪ್ರತಿ ಜೋಲಿ, ಪಾಲಕಿ ಯಾ ಟಾಂಜಾನಿಗೂ ..	1	0	0

		ರೂ.	ಆ.	ಪೈ.
26.	ಆರು ಜೋಯಿಗಳಿಗೊಡನೆ ಡಿಟೋ	0	12	0
27.	ನಾಲ್ಕು ಜೋಯಿಗಳಿಗೊಡನೆ ಡಿಟೋ	0	8	0
28.	ಯಿಬ್ಬರು ಜೋಯಿಗಳಿಗೊಡನೆ ಡಿಟೋ ಡಿಟೋ	0	4	0

ನಡೆದು ಬರುವ ದೂರ್ಗಸ್ಥರ ಮೇಲೆ ಟೋಲ್ ವಸೂಲ್ ಮಾಡತಕ್ಕದ್ದಲ್ಲ.

ಇಸ್ತಿಹಾರ್ನಾಮಾ.

1889ನೇ ಇಸವಿ 21ನೇ ಫಿಬ್ರವರಿ.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಹೊಳೇನರಸಿಪ್ಯಾಪುರ ತಾಲ್ಲೂಕಿನಲ್ಲಿನ ಕುರಂಗದ ಕಲ್ಲುಗಳನ್ನ ಜಮೂಯಿಸಿಕೊಳ್ಳತಕ್ಕ ಹಕ್ಕುದಾರಿಯು ಹೊಳೇನರಸಿಪ್ಯಾಪುರ ತಾಲ್ಲೂಕು ಕಛೇರಿಯಲ್ಲಿ ಸ್ರ 1889ನೇ ಇಸವಿ ಮಾರ್ಚಿ ತಾರೀಖು 27ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲ್ದಾರ್ರು ಅಥವಾ ಕಿರಸ್ತೇದಾರ್ರು ಹರಾಜ್ ಮಾಡಿಸುವರು.

3. ಈ ಹರಾಜಿನ ಚಿಡರಖಾಸ್ತು ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರು ಮಾಡಲ್ಪಡುವ ಪರಿಯಂತರ ಖಾಯಮಾದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ್ರ 1890ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೀಕಡಾ 25 ರೂಪಾಯಿ ಯಂತೆ ಆಗುವ ಮೊಬಲಗನ್ನು ಡಿಪಾಜಿಟ್ಟು ಇಡಲೇಕಲ್ಲದೆ ಹರಾಜ್ ಮಂಜೂರು ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದೆ ಳಗಾಗಿ ಕ್ರಯದ ಒಟ್ಟು ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ವೊಂದಾಣೆಯಂತೆ ಆಗುವ ಲೋಕಲ್ ಸೆಸ್ ದೇಖೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ, ಹಾಂಗೆ ಡಿಪಾಜಿಟ್ ಇಟ್ಟ ಮೊಬಲಗು ಸರ್ಕಾರಕ್ಕೆ ಬಂಡವಾಗಿ ತೆಗದುಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ, ಹಕ್ಕುದಾರಿಯು ಅವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಪ ವಿಕ್ರಯಿಸಲ್ಪಡುವದು.

6. ಹರಾಜಿನ ಷರತ್ತುಗಳು.

ಹಿಡುವಳೀ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು [illegible] ಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು. ಜಮೀನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವ [illegible] ಳ್ಳಲೂ ಕೂಡದು ಇಜಾರೆದಾರನಿಗೆ ಮಾರಬೇಕೇ ಹೊರ ಇತರ ಜನಗಳಿಗೆ ಮಾರಲೂಕೂಡದು.

(b) ಇಜಾರೆದಾ [illegible]

(c) ಬಂಜರು [illegible] ಟ್ಟು ಬಿಡುವದಕ್ಕೆ ಕುರಂಗ [illegible] ಳ್ಳತಕ್ಕ ಹಕ್ಕು ದೆ ಇಜಾರೆದಾರನು ಆಡ್ಡಿ ಹೇಳಕೂಡದು. ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲು ಮೊತ್ತ ಇಜಾರೆದಾರನಿಗೆ ಉಳದಿರುತ್ತೆ.

(d) ಇಜಾರೆದಾರನು ಕಲ್ಲುಗಣಿಗೋಸ್ಕರ ಜಮೀನುಗಳನ್ನೂ ಆಗಿಯಕೂಡದು ಪೊಂದು ವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನು ಲಾಯಖು ಇರುವ ಹಾಗೆ ಮಾಡಬೇಕು.

ಬಿ. ಎಸ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 27ನೇ ಫಿಬ್ರವರಿ 1889.

ಸ್ರ 1886ನೇ ಇಸವಿ ಎಪ್ರೆಲ್ ತಾರೀಖು 8ರಲ್ಲು ಕೆರೆಹಳ್ಳಿ ಡಿಪೋದಲ್ಲಿ ಹರಾಜಾದ ನಾಟಾಗಳ ಪೈಕಿ ಸಾಗುವಾನಿ ನಾಟಾ (17) ಸಾಗುವಾನಿ ಬೆಲಗು 2 ರಫ್ತಾಗದೆ ಇದುವರಿಗೆ ಡಿಪೋದಲ್ಲಿ ಇರುತ್ತದೆ ದರಖಾಸ್ತುದಾರ ಲಕ್ಷ್ಮೀಕಾಂತಕಟ್ಟೆಯೇ ಆಗಲಿ (ಇವನು ಯಿಲ್ಲಿ ಇದ್ದಾನೊ ಗೊತ್ತಿಲ್ಲ) ಅಥವಾ ಇತರ ಹಕ್ಕುದಾರ್ರೇ ಆಗಲಿ ತಮ್ಮ ಹಕ್ಕನ್ನು ಸಂಪೂರ್ಣವಾಗಿ ಸ್ಥಿರಪಡಿಸಿದ ಮೇಲೆ ಡಿಪೋ ಚಾರ್ಜ್ ಆಂದರೆ ಸದರೀ ನಾಟಾಗಳಿಗೋಸ್ಕರ ಬರಬೇಕಾದ ಭಾಡಾ ಪಾವತಿಯಿಂದ ಈ ತಾರೀಖು ಲಾಗಾಯತು 30 ದಿನಗಳೊಳಗಾಗಿ ರಫ್ತು ಮಾಡಿಕೊಳ್ಳತಕ್ಕದ್ದು. ಇಷಕ್ಕೆ ತಪ್ಪಿದರೆ ಸದರೀ ಚಿವುಟೀನೆಯು ಸರ್ಕಾರಕ್ಕೆ ಸೆಲ್ಲತಕ್ಕ ಹಣವನ್ನು ವಸೂಲ್ ಮಾಡುವ ವೈದ್ಯಿಕ್ಯ ಹರಾಜ್ ಮಾಡಲ್ಪಡುತ್ತದೆ.

ಇ. ಬಿ. ಲೌರಿ,
ಆ|| ಕಲೆಕ್ಟರ್ ಮತ್ತು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ್.